ಪ್ರಶ್ನೆಪತ್ರಿಕೆ ಕ್ರಮ ಸಂಖ್ಯೆ :
Q.P. Sl. No. :

ಮಾರ್ಚ್/ಏಪ್ರಿಲ್ **2026** ರ ಪರೀಕ್ಷೆ-1
MARCH/APRIL 2026 EXAMINATION-1

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12]
Total No. of Printed Pages : 12]

ಒಟ್ಟು ಪ್ರಶ್ನೆಗಳ ಸಂಖ್ಯೆ : 38]
Total No. of Questions : 38]

A

CCE RF/RR/ PF/PR

ಸಂಕೇತ ಸಂಖ್ಯೆ : 33-K **Code No. : 33-K**

ವಿಷಯ : ದ್ವಿತೀಯ ಭಾಷೆ — ಕನ್ನಡ

Subject : Second Language — KANNADA

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ/ ಖಾಸಗಿ ಪುನರಾವರ್ತಿತ ಅಭ್ಯರ್ಥಿ)
(Regular Fresh / Regular Repeater / Private Fresh/ Private Repeater)

ದಿನಾಂಕ : 25. 03. 2026] [Date : 25. 03. 2026
ಸಮಯ : ಬೆಳಗ್ಗೆ 10-00 ರಿಂದ ಮಧ್ಯಾಹ್ನ 1-00 ಘವರೆಗೆ] [Time : 10-00 A.M. to 1-00 P.M.
ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

Cut here/ಇಲ್ಲಿ ಕತ್ತರಿಸಿ

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ)***. ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

Tear here/ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER WITH REVERSE JACKET
ಹಿಮ್ಮುಖ ಜಾಕೆಟ್ ಹೊಂದಿರುವ ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here/ಇಲ್ಲಿಂದ ಕತ್ತರಿಸಿ

33-K 10/902

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : **4 × 1 = 4**

1. ಸರ್ವನಾಮ ಪದವಿದು

(ಎ) ಜಿಂಕೆ

(ಬಿ) ವೈದ್ಯ

(ಸಿ) ಅವನು

(ಡಿ) ಇಂದ್ರ

2. ಞ, ಙ, ಣ, ನ, ಮ ಅಕ್ಷರಗಳು

(ಎ) ಯೋಗವಾಹಗಳು

(ಬಿ) ಅಲ್ಪಪ್ರಾಣಾಕ್ಷರಗಳು

(ಸಿ) ಮಹಾಪ್ರಾಣಾಕ್ಷರಗಳು

(ಡಿ) ಅನುನಾಸಿಕಗಳು

33-K 10/902

3. 'ವೀರೇಶ' ಪದವು

(ಎ) ಸವರ್ಣದೀರ್ಘ ಸಂಧಿ

(ಬಿ) ಲೋಪ ಸಂಧಿ

(ಸಿ) ಆಗಮ ಸಂಧಿ

(ಡಿ) ಗುಣ ಸಂಧಿ

4. ಕ್ರಿಯಾ ಸಮಾಸಕ್ಕೆ ಉದಾಹರಣೆ

(ಎ) ಗಂಜಿಯುಂಡು

(ಬಿ) ನೆಲಮುಗಿಲು

(ಸಿ) ಸವಿಚೈತ್ರ

(ಡಿ) ಹೊಂಬಾಳೆ

33-K/10/902

II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12

5. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ಹೇಳಿದ್ದಾರೆ ?

6. ಪುಟ್ಟರಾಜರ ತಂದೆ-ತಾಯಿಗಳ ಹೆಸರೇನು ?

7. ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇರುತ್ತದೆ ?

8. ಹರಿದ್ವಾರದಲ್ಲಿ ಏನನ್ನು ನೋಡಬೇಕೆಂಬುದು ಲೇಖಕರ ಗುರಿಯಾಗಿತ್ತು ?

9. ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?

10. ಸೌಜನ್ಯವು ಹೇಗೆ ಅರಳಬೇಕು ?

11. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?

12. ಕವಿ ಸಿ.ಪಿ.ಕೆ. ಅವರು ಹೇಳುವಂತೆ ತಿಮಿರಕ್ಕೆ ವೈರಿ ಯಾವುದು ?

33-K/10/2021

13. ಜನಪದರು ತುಂಬಿದ ಕುಣಿಗಲ್ ಕರೆಯನ್ನು ಯಾವುದಕ್ಕೆ ಹೋಲಿಸಿದ್ದಾರೆ ?

14. ಬಸವಣ್ಣನವರ ಪ್ರಕಾರ ನಶಿಸುವುದು ಯಾವುದು ?

15. ಸೊನ್ನಲಿಗೆಯ ಸಿದ್ಧರಾಮರ ವಚನಗಳ ಅಂಕಿತನಾಮ ಯಾವುದು ?

16. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 × 2 = 16**

17. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಹೇಳುವಂತೆ ನಮ್ಮ ದೇಶದ ರಕ್ಷಣಾಪಡೆ ಏಕೆ ಪ್ರಬಲವಾಗಿರಬೇಕು ?

18. ಹಕ್ಕಿಗಳು ಗೂಡುಗಳನ್ನು ಎಲ್ಲೆಲ್ಲಿ ಕಟ್ಟಬಲ್ಲವು ?

19. ಕವಿ ಜಿ.ಎಸ್. ಶಿವರುದ್ರಪ್ಪನವರು ನಿಸರ್ಗದ ಆರಾಧನೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ ?

33-K/10/902

20. ಹಾ.ಮಾ. ನಾಯಕರು ಹೇಳುವಂತೆ ಸೌಜನ್ಯಶೀಲರ ಲಕ್ಷಣಗಳಾವುವು ?

21. ಕುಣಿಗಲ್ ಕೆರೆಯಲ್ಲಿ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?

22. ಬಸವಣ್ಣನವರು 'ದೇಹವೇ ದೇಗುಲ'ವೆಂಬ ಕಲ್ಪನೆಯನ್ನು ಹೇಗೆ ವರ್ಣಿಸಿದ್ದಾರೆ ?

23. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆಯನ್ನು ವಿವರಿಸಿ.

24. ಡಾ. ಎಚ್.ಎಲ್. ಪುಷ್ಪ ಅವರ ಪ್ರಕಾರ ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ವಿವರಿಸಿ.

IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : **1 × 3 = 3**

25. ಅ.ರಾ. ಮಿತ್ರ

V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : **1 × 3 = 3**

26. ಯುಗದ ಆದಿಯು ಬಂತು ಸೊಗದ ಸುಗ್ಗಿಯ ತಂತು
ಜಗಕೆಲ್ಲ ಹೊಸ ಕಳೆಯು ತುಂಬಿತೆಂತು !
ಬಗೆ ಬಗೆಯ ಬಣ್ಣಗಳ ಬರೆದ ಚಿತ್ರದ ಹಾಗೆ
ನೆಲದಮ್ಮ ನವವಧುವೆ ಆದಳಿಂತು !

33-K 10/902

VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3

27. ''ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ.''

VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3

28. ಬೆಳೆಯುವ ಸಿರಿ ಮೊಳಕೆಯಲ್ಲಿ

ಅಥವಾ

ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15

29. ''ಅವರ ಬಾಹ್ಯ ಕಣ್ಣು ಅಳಿಸಿದ್ದರೂ ಅಂತರಂಗದ ಕಣ್ಣು ಅರಳಿತ್ತು.''

30. ''ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ.''

31. ''ಅಮ್ಮನ ಮಾತು ಸುಳ್ಳಾಗಲಾರದು''

33-K 10/902

32. "ಸಿಡುಕು ಮಿಡುಕನು ತೊರೆದು ಮೌನಿಯಾಗು"

33. "ಎಮ್ಮರಮನೆಯ ನಾರಿಯರೆ ಸಾಕು."

IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 × 4 = 4**

34. ಏಕಾಂಗಿ ವೀರನಂತೆ .....

.....

.....

..... ಕತ್ತಲಲ್ಲಿ ನಡೆದನು

ಅಥವಾ

ಕಾಡು ಕಾಡು ಅಲೆದ .....

.....

.....

..... ಮಹಾಬೆಳಕೊಂದು ಕಂಡಿತು

X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 × 4 = 4**

35. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ ಎಂಬುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ಬರೆಯಿರಿ.

ಅಥವಾ

ಗುರಿ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

33-K 10/902

XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

1 × 4 = 4 (2 + 2)

36. ಒಂದು ಬಾರಿ ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣಕಟ್ಟಿ ಸ್ನೇಹಿತರನ್ನು ನೋಡಿಕೊಂಡು ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಗಂಟೆಯಾಗಿತ್ತು. ಅವರು ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕು. ಕಾಡುದಾರಿ ಆದರೂ ಬೆಳದಿಂಗಳ ದಿನ; ಸ್ವಲ್ಪ ದೊಡ್ಡ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಯೋಚಿಸುತ್ತಾ ಬೇಗಬೇಗ ನಡೆದರು. ಆದರೂ ಕಣಿವೆಗೆ ಬರುವ ವೇಳೆಗೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು.

ರಸ್ತೆಗೆ ಸ್ವಲ್ಪದೂರದ ಗುಹೆಯಲ್ಲಿ ಮಲಗಿದ್ದ ಹುಲಿ ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಒಂದೆರಡು ಬಾರಿ ಮೈಮುರಿದು ಹೊರಟಿತು. ರಸ್ತೆಯ ಬಳಿ ಬಂದಾಗ ಶಾನುಭೋಗರನ್ನು ಕಂಡಿತು. ಅವರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು. ಹುಲಿಯ ಆನಂದಕ್ಕೆ ಕೊರತೆಯೊಂದಿತ್ತು. ಶಾನುಭೋಗರು ಹುಲಿಗೆ ಅಭಿಮುಖವಾಗಿರದೆ ಅದರ ಕಡೆ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಯಾರನ್ನೇ ಆಗಲಿ ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ. ಶತ್ರುವನ್ನಾದರೂ

33-K 10/902

ಸರಿಯೇ , ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂದು ಅರಿತಿದ್ದವು.

ಹುಲಿ ಹೇಗಾದರೂ ಮಾಡಿ ಶಾನುಭೋಗರಿಗೆ ಅಭಿಮುಖವಾಗಿ ಬರಬೇಕು ಅಂದುಕೊಂಡಿತು. ಆದರೆ ಅವರನ್ನು ಹಾದು ಮುಂದೆ ಹೋಗುವುದು ಕಷ್ಟ ನಿಶ್ಯಬ್ದವಾಗಿ ಅವರ ಹಿಂದೆಯೆ ನಡೆಯಿತು. ನಂತರ ಅವರ ಮುಂಭಾಗಕ್ಕೆ ನೆಗೆದು ತಿರುಗಿ ಮೇಲೆ ಬೀಳಬೇಕು ಎಂದುಕೊಂಡು ತನ್ನ ದೇಹವನ್ನು ಬೆಕ್ಕಿನಂತೆ ಹುದುಗಿಸಿಕೊಂಡು ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು. ಇಲ್ಲಿ ಹುಲಿಯ ಧರ್ಮಶ್ರದ್ಧೆ ಮೆಚ್ಚುವಂತದ್ದಾಗಿದೆ.

ಪ್ರಶ್ನೆಗಳು :

ಅ) ಹುಲಿ ತನ್ನ ದೇಹವನ್ನು ಬೆಕ್ಕಿನಂತೆ ಹುದುಗಿಸಿಕೊಳ್ಳಲು ಕಾರಣವೇನು ?

ಆ) ಚಿಕ್ಕನಾಯಕನಹಳ್ಳಿಯಿಂದ ವಾಪಸ್ಸು ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?

XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4

37. ಮತದಾನದ ಮಹತ್ವ

ಅಥವಾ

ನನ್ನ ಕುಟುಂಬ

33-K 10/902

XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **1 × 5 = 5**

38. ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವಿನಯ' ಎಂದು ಭಾವಿಸಿಕೊಂಡು, ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಎರಡು ಬಸ್ಸುಗಳನ್ನು ಒದಗಿಸುವಂತೆ ಕ.ರಾ.ರ.ಸಾ. ಸಂಸ್ಥೆಯ ಡಿಪೋ ಮ್ಯಾನೇಜರ್‌ರವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಅಂಜುಂ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಕರ್ನಾಟಕ ರಾಜ್ಯೋತ್ಸವ' ಕಾರ್ಯಕ್ರಮ ಕುರಿತು ಶಿವಮೊಗ್ಗ ಸರ್ಕಾರ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಗುಲ್ನಾಜ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ.

33-K 10/902

DO NOT WRITE ANYTHING HERE